53

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗಣಕೀಕೃತ ಪಹಣಿಗಳನ್ನು ರೈತರಿಗೆ ಒದಗಿಸಲು ಶುಲ್ಕ ಸಂಗ್ರಹಿಸುವ ಕುರಿತು.

ಪ್ರಸ್ತಾವನೆ: ರಾಜ್ಯದ ಬಹಳಷ್ಟು ತಾಲ್ಲೂಕುಗಳಲ್ಲಿ ಭೂ ದಾಖಲೆಗಳನ್ನು ಗಣಕೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ ಮತ್ತು ಹಲವಾರು ತಾಲ್ಲೂಕುಗಳಲ್ಲಿ ಪಹಣಿಗಳ ಗಣಕೀಕರಣವನ್ನು ಕಾರ್ಯಗತಗೊಳಿಸಲಾಗಿದೆ. ಈಗಿನ ವ್ಯವಸ್ಥೆಯಲ್ಲಿ ರೈತರಿಗೆ ಪ್ರತಿ ವರ್ಷವು ಪಹಣಿಗಳ ಒಂದು ಪ್ರತಿಯನ್ನು ಉಚಿತವಾಗಿ ನೀಡಲಾಗುತ್ತಿತ್ತು. ಪಹಣಿಗಳ ಗಣಕೀಕರಣ ಯೋಜನೆಯಲ್ಲಿಯೂ ಸಹ ಹಿಂದಿನ ವ್ಯವಸ್ಥೆಯನ್ನು ಮುಂದುವರಿಸುತ್ತಾ ರೈತರಿಗೆ ಪಹಣಿಗಳ ಒಂದು ಉಚಿತ ಪ್ರತಿಯನ್ನು ಪ್ರತಿ ವರ್ಷ ಒದಗಿಸಲು ಉದ್ದೇಶಿಸಲಾಗಿದೆ.

ಈ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ, ಮತ್ತು ಪ್ರತಿ ತಾಲ್ಲೂಕಿನಲ್ಲಿ ರೈತರಿಗೆ ಅವಶ್ಯಕತೆ ಇದ್ದಲ್ಲಿ ಬೇಕೆಂದಾಗ ಪಹಣಿಗಳನ್ನು ನೀಡಲು (ರೈತರಿಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ ಪ್ರತಿ ವರ್ಷವು ಒಂದು ಉಚಿತ ಪ್ರತಿ ನೀಡಿರುವುದಲ್ಲದೆ) ಕಿಯಾಸ್ಕ್ ನಡೆಸುವಲ್ಲಿ ಹೆಚ್ಚಿನ ಆವರ್ತಕ ವೆಚ್ಚ ತಗಲುತ್ತದೆ. ಈ ಆವರ್ತಕ ವೆಚ್ಚವನ್ನು ಭರಿಸಲು ತಾಲ್ಲೂಕು ಕೇಂದ್ರಗಳಲ್ಲಿ ನೀಡಲಾಗುವ ಹೆಚ್ಚುವರಿ ಪಹಣಿಗಳ ಪ್ರತಿ ಒಂದಕ್ಕೆ ರೂ.15.00 ಗಳ ಶುಲ್ಕ ವಿಧಿಸಲು ಪ್ರಸ್ತಾಪಿಸಿ ಸದರಿ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಕಂಇ 62 ಎಂಆರ್‌ಆರ್ 2000**

**ಬೆಂಗಳೂರು, ದಿನಾಂಕ19.4.2001**

ಸರ್ಕಾರವು ಮೇಲ್ಕಾಣಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಗ್ರಾಮಲೆಕ್ಕಾಧಿಕಾರಿಗಳು ರೈತರ ಮನೆ ಬಾಗಿಲಿಗೆ ಪ್ರತಿ ವರ್ಷ ಉಚಿತವಾಗಿ ತಲುಪಿಸುವ ಗಣಕೀಕೃತ ಪಹಣಿಯ ಒಂದು ಪ್ರತಿಯನ್ನು ಹೊರತು ಪಡಿಸಿ, ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲಾಗುತ್ತಿರುವ ಕಿಯಾಸ್ಕ್ ಗಳ ಮುಖಾಂತರ ಪ್ರತಿ ರೈತರಿಗೆ ಒದಗಿಸುವ ಯಾವುದೇ ಹೆಚ್ಚುವರಿ ಪ್ರತಿ ಪಹಣಿ ಪತ್ರಕ್ಕೆ ತಲಾ ರೂ.15.00 ಗಳ (ಹದಿನೈದು ರೂಪಾಯಿಗಳು ಮಾತ್ರ) ಶುಲ್ಕವನ್ನು ಸಂಗ್ರಹಿಸಲಾಗುವುದು.

ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ 0029-00-800-0-01 "01-ಸೇವೆ ಸಲ್ಲಿಸಿದ್ದಕ್ಕೆ ಮಾಡಿದ ಪಾವತಿ ವಸೂಲಿ" ಅಡಿಯಲ್ಲಿ ಜಮಾ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್.ಡಿ.29/ವೆಚ್ಚ-7/2001 ದಿನಾಂಕ 24.2.2001ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೀವ್ ಚಾವ್ಲಾ)
ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಸುಧಾರಣೆ)

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ವಿಭಾಗಾಧಿಕಾರಿಗಳು
3. ಎಲ್ಲಾ ಜಿಲ್ಲಾಧಿಕಾರಿಗಳು
4. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
5. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ-4)
6. ಮಾನ್ಯ ಕಂದಾಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
7. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
7. ಬಿಡಿ ಪ್ರತಿಗಳು.

ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಹಾಸನ ಜಿಲ್ಲೆ, ಹಾಸನ. 09-05-01

ಸಂ. ಆರ್‌ಆರ್‌ಸಿ/30/01-02

ಪ್ರತಿಯನ್ನು ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ತಹಶೀಲ್ದಾರರು,
ಚನ್ನರಾಯಪಟ್ಟಣ ತಾಲ್ಲೂಕು ಇವರಿಗೆ:

ಜಿಲ್ಲಾಧಿಕಾರಿಯವರ ಪರವಾಗಿ
ಹಾಸನ ಜಿಲ್ಲೆ, ಹಾಸನ.